14. ಅನುಬಂಧಗಳು–1

ದಿನಾಂಕ 10–12–2012ರ ಲಿಖಿತ ಉತ್ತರಿಸಲಾದ ಪ್ರಶ್ನೆಗಳು ಮತ್ತು ದಿನಾಂಕ 7–12–2012ರ ಚುಕ್ಕೆಗುರುತಿನ ಹಾಗೂ ಚುಕ್ಕೆಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರಗಳು

ಸಣ್ಣ ಕೈಗಾರಿಕೆಗಳ ಸ್ಥಾಪನೆ

313 (579)

ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮಿ ಲೇಔಟ್)

ಅ) ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ಕೆ.ಐ.ಎ.ಡಿ.ಬಿ.ಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಅರ್ಜಿಗಳನ್ನು ಪುರಸ್ಕರಿಸಲು ಕೆ.ಐ.ಎ.ಡಿ.ಬಿ. ಅನುಸರಿಸುತ್ತಿರುವ ಮಾನದಂಡವೇನು;

ಇ) ಅರ್ಜಿ ಸ್ವೀಕಾರಕ್ಕೆ ನಿಗಧಿಪಡಿಸಿರುವ ಶುಲ್ಕವೆಷ್ಟು;

ಈ) ಇಲಾಖೆಯಲ್ಲಿ ಮಧ್ಯವರ್ತಿಗಳ ಕಾಟ ಅಧಿಕವಾಗಿದ್ದು, ಇದರ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಉ) ರಾಜಾಜಿನಗರ 6ನೇ ಬ್ಲಾಕ್‌ನಲ್ಲಿರುವ ಇಂಡಸ್ಟ್ರೀಯಲ್ ಎಸ್ಟೇಟ್ ನಲ್ಲಿ ಬಫರ್ ಜೋನ್‌ನಲ್ಲಿ ಎಷ್ಟು ಜಾಗವನ್ನು ಯಾರ್ಯಾರಿಗೆ, ಯಾವ ವರ್ಷದಲ್ಲಿ ಹಂಚಿಕೆ ಮಾಡಲಾಗಿದೆ, ಆ ಜಾಗದಲ್ಲಿ ಯಾವ ಕಟ್ಟಡಗಳು ಬಂದಿವೆ?

ಶ್ರೀ ಮುರುಗೇಶ್ ಆರ್. ನಿರಾಣಿ
(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)
ಉತ್ತರ

ಅ) ಒಟ್ಟು 15417 ಅರ್ಜಿಗಳು ಸ್ವೀಕೃತವಾಗಿರುತ್ತದೆ.

ಆ) ಸಣ್ಣ ಕೈಗಾರಿಕಾ ಘಟಕಗಳಿಗೆ ಜಮೀನು ಹಂಚಿಕೆ ಮಾಡಲು ಈ ಕೆಳಕಂಡ ಸಮಿತಿಗಳನ್ನು ರಚಿಸಲಾಗಿದೆ.

ಮುಖ್ಯಕಾರ್ಯನಿರ್ವಾಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರ ಅಧ್ಯಕ್ಷತೆಯಲ್ಲಿನ ಹಂಚಿಕೆ ಸಮಿತಿ	ಬೆಂಗಳೂರು ನಗರ ಜಿಲ್ಲೆಯಲ್ಲಿ ಎಲ್ಲಾ ವಲಯಗಳ ಸಣ್ಣಕೈಗಾರಿಕೆಗಳಿಗೆ1ಎಕರೆಯವರೆಗೂ ನಿವೇಶನವನ್ನು ಹಂಚಿಕೆ ಮಾಡಲಾಗುವುದು. ಬೆಂಗಳೂರುಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಲ್ಲಿ ಸಣ್ಣ ಕೈಗಾರಿಕೆಗಳಿಗೆ 2 ಎಕರೆಗಳವರೆಗೆ ನಿವೇಶನವನ್ನು ಹಂಚಿಕೆ ಮಾಡಲಾಗುವುದು.
ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ.	ರೂ.3.00 ಕೋಟಿಗಳವರೆಗೆ ಬಂಡವಾಳ ಹೂಡುವ ಸಣ್ಣ ಕೈಗಾರಿಕಾ ಘಟಕಗಳ ಅರ್ಜಿಗಳನ್ನು ಪರಿಶೀಲಿಸಿ ಕೈಗಾರಿಕಾ ನಿವೇಶನಗಳ ಹಂಚಿಕೆಯನ್ನು ನಿರ್ಣಯಿಸಲಾಗುವುದು.

ಮಾನದಂಡಗಳು:–

ನಿವೇಶನ ಹಂಚಿಕೆ ಮಾಡಲು ಕೋರಿ ಅರ್ಜಿದಾರರು ಭರ್ತಿ ಮಾಡಿದ ಮಂಡಳಿಯ ನಿಗಧಿತ ಅರ್ಜಿಯೊಂದಿಗೆ ಉದ್ದೇಶಿತ ಯೋಜನಾ ವರದಿ, ಮಾಲೀಕತ್ವ/ಪಾಲುದಾರಿಕೆ/ಪ್ರೈ.ಲಿಮಿಟೆಡ್/ಪಬ್ಲಿಕ್ ಲಿಮಿಟೆಡ್ ಬಗ್ಗೆ ವಿವರವಾದ ಮಾಹಿತಿ, ಸಣ್ಣ ಕೈಗಾರಿಕಾ ನೋಂದಣಿ ಪ್ರಮಾಣ ಪತ್ರ, ಭೂ ಉಪಯೋಗ ನಕ್ಷೆ, ಇ.ಎಂ.ಡಿ ರೂ.500–00/– ಪ್ರತಿ ಎಕರೆಗೆ ಮತ್ತು ಆಯಾ ಕೈಗಾರಿಕಾ ಪ್ರದೇಶದಲ್ಲಿ ನಿಗಧಿಪಡಿಸಿರುವ ಪ್ರಸಕ್ತ ಬೆಲೆಯಲ್ಲಿ ಶೇ.20% ರಷ್ಟು ಮುಂಗಡ ಹಣವನ್ನು ಡಿ.ಡಿ ಮೂಲಕ ಮಂಡಳಿಯ ಹೆಸರಿಗೆ ಸಲ್ಲಿಸಬೇಕಾಗಿರುತ್ತದೆ.

ತಾಂತ್ರಿಕ ಪದವೀಧರರು, ರಫ್ತು ಯೋಜನೆಗಳು, ಸ್ಥಳೀಯ ಮಹಿಳಾ ಉದ್ಯಮಿಗಳು ವಿಸ್ತರಣೆ ಹಾಗೂ ಸ್ಥಳಾಂತರಕ್ಕಾಗಿ ಹಂಚಿಕೆ ಕೋರಿರುವ ಅರ್ಜಿದಾರರು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅರ್ಜಿದಾರರಿಗೆ ಆದ್ಯತೆಯ ಮೇರೆಗೆ ದಿನಾಂಕ:06–12–2005ರ ಮಂಡಳಿಯ 270ನೇ ಸಭೆಯಲ್ಲಿ ನೀಡಿರುವ ನಿರ್ದೇಶನದಂತೆ ಜಮೀನು ಹಂಚಿಕೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಇ) ಅರ್ಜಿ ಶುಲ್ಕ ರೂ.250.00ಗಳಾಗಿದ್ದು ಅರ್ಜಿಯನ್ನು ಸಲ್ಲಿಸುವಾಗ ಬೆಂಗಳೂರು ನಗರ ಮತ್ತು ಗ್ರಾಮಾಂತರದ ಆಯಾ ಕೈಗಾರಿಕಾ ಪ್ರದೇಶಗಳ ಪ್ರಸಕ್ತ ದರಗಳ ಶೇ.20% ಮುಂಗಡ ಹಣ ಹಾಗೂ ಪ್ರತಿ ಎಕರೆಗೆ ಆರಂಭಿಕ ಠೇವಣಿ ರೂ.500.00 ಗಳನ್ನು ಪಾವತಿಸಬೇಕಾಗಿರುತ್ತದೆ.

(ಈ) ಈ ಕುರಿತು ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.

(ಉ) ರಾಜಾಜಿನಗರ 6ನೇ ಬ್ಲಾಕಿನಲ್ಲಿರುವ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಬಫರ್ ಜೋನ್ ಇರುವುದಿಲ್ಲ. ಅಂತೆಯೇ ಜಾಗಗಳ ಹಂಚಿಕೆ ಪ್ರಶ್ನೆ ಉದ್ಭವಿಸುವುದಿಲ್ಲ.

ಖಾಸಗಿ, ಸರ್ಕಾರದ ಬೃಹತ್ ಕೈಗಾರಿಕೆಗಳು

257 : (555)

ಶ್ರೀ ಬಂಡೆಪ್ಪ ಕಾಶೆಂಪೂರ (ಬೀದರ್ ದಕ್ಷಿಣ)

ಪ್ರಶ್ನೆ

ಅ) ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರದ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಉತ್ಪಾದಿಸುವ ಉತ್ಪನ್ನಗಳು ಯಾವುವು;